**ಎಸ್.ಸಿ. ನಂ.10/2019**

**ದೋ.ಸಾ. : 41 ಫ್ರಾ.ಸಾ. : 33**

**ದಿನಾಂಕಃ 20-08-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರಿದ ಪಾಟೀ ಸವಾಲುಃ 2 ಮತ್ತು 3 ನೇ ಆರೋಪಿ ಪರ ಶ್ರೀ ಎಲ್.ಎಸ್.ಕೆ. ವಕೀಲರಿಂದಃ-**

8. ಘಟನಾ ಸ್ಥಳದಲ್ಲಿ ನಾವು ಒಟ್ಟು 10-12 ಜನರು ಇದ್ದೆವು. ಘಟನಾ ಸ್ಥಳದಲ್ಲಿ ಒಟ್ಟು ಮೂರು ಪಂಚನಾಮೆಗಳನ್ನು ಮಾಡಿರುತ್ತಾರೆ. ಮೊದಲಿಗೆ ಬೈಕ್ ನಿಲ್ಲಿಸಿಟ್ಟ ಸ್ಥಳದ ಪಂಚನಾಮೆ, ನಂತರ ಕಣ್ಣಿಗೆ ಬಟ್ಟೆ ಕಟ್ಟಿದ್ದ ಸ್ಥಳದ ಪಂಚನಾಮೆ, ನಂತರ ಶವ ಬಿದ್ದ ಜಾಗದ ಪಂಚನಾಮೆ ಮಾಡಿರುತ್ತಾರೆ. ಸ್ಥಳಕ್ಕೆ ಹೋಗುವಾಗ ಜೊತೆಯಲ್ಲಿ ಲ್ಯಾಪ್-ಟಾಪ್, ಪ್ರಿಂಟರುಗಳನ್ನು ತೆಗೆದುಕೊಂಡು ಹೋಗಿದ್ದೆವು. ಪಂಚನಾಮೆಗಳನ್ನು ಕೈಯಿಂದ ಬರೆಯಲಾಗಿತ್ತು. ಮೂರೂ ಪಂಚನಾಮೆಗಳನ್ನು ಬರೆದ ವ್ಯಕ್ತಿಯ ಹೆಸರು ಹಾಗೂ ಅವುಗಳನ್ನು ಬರೆದ ಸಮಯ ನನಗೆ ನೆನಪಿಲ್ಲ. ಮೂರೂ ಪಂಚನಾಮೆಗಳನ್ನು ಬರೆಯುವಾಗ ಸುಮಾರು ಮಧ್ಯಾಹ್ನ 2.00 ಗಂಟೆಯಾಗಿತ್ತು. ಠಾಣೆಯೊಳಗೆ ಯಾವ ಜಾಗದಲ್ಲಿ ಆರೋಪಿತರು ತಮ್ಮ ಸ್ವ-ಖುಷಿ ಹೇಳಿಕೆಯನ್ನು ನೀಡಿದರು ಎಂದರೆ ಸಾಕ್ಷಿಯು, ಈಗ ನನಗೆ ನೆನಪಿಲ್ಲ ಎಂದು ನುಡಿಯುತ್ತಾರೆ. 2 ಮತ್ತು 3 ನೇ ಆರೋಪಿತರ ಸ್ವ-ಖುಷಿ ಹೇಳಿಕೆಯನ್ನು ಒಂದು ತಾಸಿನ ಕಾಲ ಪಡೆದುಕೊಳ್ಳಲಾಗಿರುತ್ತದೆ. ನಾವು ಘಟನಾ ಸ್ಥಳಕ್ಕೆ ತೆರಳುವಾಗ ಸುಮಾರು ಬೆಳಿಗ್ಗೆ 10.00 ಗಂಟೆಯಾಗಿತ್ತು ಎಂದರೆ ಸರಿ.

9. ಮೊದಲಿಗೆ ಬೈಕ್ ನಿಲ್ಲಿಸಿಟ್ಟ ಸ್ಥಳ, ನಂತರ ಕಣ್ಣಿಗೆ ಬಟ್ಟೆ ಕಟ್ಟಿದ್ದ ಸ್ಥಳ, ನಂತರ ಶವ ಬಿದ್ದ ಸ್ಥಳದ ಫೋಟೊ ತೆಗೆಯಲಾಗಿತ್ತು. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದ 12 ಫೋಟೊಗಳನ್ನು ತೆಗೆಯುವ ಕಾಲದಲ್ಲಿ ಮೃತನ ಸಂಬಂಧಿಕರು ಯಾರು ಇದ್ದರು ಎಂದರೆ ನನಗೆ ನೆನಪಿಲ್ಲ. ಶವ ಬಿದ್ದ ಸ್ಥಳವು ತಗ್ಗಿನ ಸ್ಥಳವಾಗಿತ್ತಾ ಅಥವಾ ಸಮತಟ್ಟಾದ ಸ್ಥಳವಾಗಿತ್ತಾ ಎಂದರೆ ಸಾಕ್ಷಿಯು ತಗ್ಗಿನ ಸ್ಥಳವಾಗಿತ್ತು ಎಂದು ನುಡಿಯುತ್ತಾರೆ. ಶವ ಬಿದ್ದ ಸ್ಥಳವು ಸಮತಟ್ಟಾದ ಸ್ಥಳದಿಂದ ಸುಮಾರು 20 ಮೀ. ತಗ್ಗಾಗಿರುತ್ತದೆ. ನಾನು ಶವವನ್ನು ನೋಡಿದಾಗ ಶವವು ಊದಿಕೊಂಡಿತ್ತು ಹಾಗೂ ಬಿರುಕು ಬಂದಿತ್ತು ಎಂದರೆ ಸರಿ. ಶವದ ಮೇಲೆ 2-3 ಇಂಚುಗಳಷ್ಟು ಬಿರುಕು

ಬಂದಿತ್ತು ಎಂದರೆ ಸರಿ. ಶವದ ಬಿದ್ದ ಸ್ಥಳದಿಂದ ಟೀ–ಶರ್ಟ್ ಮತ್ತು ಬನಿಯಾನ್ ಸುಮಾರು 10 ಅಡಿ ಅಂತರದಲ್ಲಿ ಬಿದ್ದಿದ್ದವು ಹಾಗೂ ಅವುಗಳು ಬೇರೆ ಬೇರೆ ಅಂತರದಲ್ಲಿ ಬಿದ್ದಿದ್ದವು. ಸದರಿ ಎರಡೂ ಬಟ್ಟೆಗಳ ಅಂತರ ಸುಮಾರು 2 ಅಡಿ ಇರುತ್ತದೆ. ಬನಿಯಾನ್ ಮತ್ತು ಟೀ–ಶರ್ಟ್ ಬಿದ್ದ ಸ್ಥಳದಲ್ಲಿ ರಕ್ತದ ಕಲೆಗಳು ಇದ್ದವು. ಸದರಿ ಸ್ಥಳದಲ್ಲಿ ತನಿಖಾಧಿಕಾರಿಗಳು ಮಣ್ಣನ್ನು ಪರೀಕ್ಷೆಗಾಗಿ ಸಂಗ್ರಹಿಸಿರುತ್ತಾರೆ. ಕಣ್ಣಿಗೆ ಬಟ್ಟೆ ಕಟ್ಟಿದ ಸ್ಥಳದಲ್ಲಿ ರಕ್ತದ ಕಲೆಗಳು ಇದ್ದ ಬಗ್ಗೆ ನನಗೆ ನೆನಪಿಲ್ಲ.

10. ಘಟನಾ ಸ್ಥಳಕ್ಕೆ ಶವ ಪರೀಕ್ಷೆಗಾಗಿ ಒಬ್ಬರು ವೈದ್ಯರು ಮತ್ತು ಒಬ್ಬರು ಸಹಾಯಕರು ಬಂದಿದ್ದರು, ಆದರೆ ಅವರ ಹೆಸರು ನನಗೆ ನೆನಪಿಲ್ಲ. ವೈದ್ಯರು ಶವ ಪರೀಕ್ಷೆಯನ್ನು ಸುಮಾರು 2 ತಾಸುಗಳ ಕಾಲ ಮಾಡಿದ್ದರು, ಆದರೆ ಎಷ್ಟು ಗಂಟೆಗೆ ಪ್ರಾರಂಭಿಸಿ, ಎಷ್ಟು ಗಂಟೆಗೆ ಅಂತ್ಯಗೊಳಿಸಿದರು ಎಂದರೆ ನನಗೆ ನೆನಪಿಲ್ಲ. ಶವವನ್ನು ಮೃತನ ಅಣ್ಣನಿಗೆ ಹಸ್ತಾಂತರಿಸಿರುತ್ತಾರೆ. ಘಟನಾ ಸ್ಥಳವನ್ನು ಬಿಡುವಾಗ ಸಂಜೆ ಸುಮಾರು 5.00 ಗಂಟೆಯಾಗಿತ್ತು. ಘಟನಾ ಸ್ಥಳದಿಂದ ನಾವು ವಾಹನಗಳನ್ನು ನಿಲ್ಲಿಸಿದ ಸ್ಥಳಕ್ಕೆ ಹೋಗಲು ಸುಮಾರು 10–15 ನಿಮಿಷವಾಗಿರುತ್ತದೆ ಹಾಗೂ 50–60 ಮೀ. ಅಂತರವಿರುತ್ತದೆ. ನಾವು ಅಲ್ಲಿಂದ ಕಾರವಾರದ ಕಡೆಗೆ ಹೊರಟಾಗ ಸುಮಾರು 5.30 ಗಂಟೆಯಾಗಿತ್ತು. ಅಲ್ಲಿಂದ ಕಾರವಾರಕ್ಕೆ ಬರಲು ಸುಮಾರು ಒಂದು ತಾಸು ಸಮಯ ಹಿಡಿದಿರುತ್ತದೆ. ಘಟನಾ ಸ್ಥಳದಿಂದ ನಾವು ನೇರವಾಗಿ ಸುಮಾರು 6.30 ಗಂಟೆಗೆ ಸಿವಿಲ್ ಆಸ್ಪತ್ರೆಗೆ ಹೋಗಿರುತ್ತೇವೆ. ಸಿವಿಲ್ ಆಸ್ಪತ್ರೆಯ ಆವರಣದಲ್ಲಿ ಸಿ.ಸಿ. ಕ್ಯಾಮರಾಗಳು ಇದ್ದವಾ ಎಂದರೆ ಸಾಕ್ಷಿಯು ಇರಬಹುದು ಎಂದು ನುಡಿಯುತ್ತಾರೆ. ಸಿ.ಸಿ. ಟಿ.ವಿ ಇದ್ದ ಬಗ್ಗೆ ತನಿಖಾಧಿಕಾರಿಗಳು ಆಸ್ಪತ್ರೆಯ ಸಿಬ್ಬಂದಿಯ ಬಳಿ ಏನಾದರೂ ವಿಚಾರಣೆ ಮಾಡಿದ್ದಾರಾ ಎಂದರೆ ಸಾಕ್ಷಿಯು, ನನ್ನ ಮುಂದೆ ಮಾಡಿರುವುದಿಲ್ಲ ಎಂದು ನುಡಿಯುತ್ತಾರೆ.

11. ಸಿವಿಲ್ ಆಸ್ಪತ್ರೆಯ ಆವರಣದಲ್ಲಿ 6.30 ರಿಂದ 7.00 ಗಂಟೆಯವರೆಗೆ ಬೈಕ್ ಪಂಚನಾಮೆಯನ್ನು ಮಾಡಿರುತ್ತಾರೆ. ಬೈಕ್ ಪಂಚನಾಮೆ ಮಾಡಲು ತನಿಖಾಧಿಕಾರಿಯು ಅಕ್ಕಪಕ್ಕದ ಜನರನ್ನು ಪಂಚರಾಗಿ ಕರೆದಿರುತ್ತಾರೆ, ಸದರಿ ಪಂಚರ ಹೆಸರು ನನಗೆ ನೆನಪಿಲ್ಲ. ನಂತರ ಸಿವಿಲ್ ಆಸ್ಪತ್ರೆಯಿಂದ ಠಾಣೆಗೆ ನಾವು 10–15 ನಿಮಿಷಗಳಲ್ಲಿ ಹೋಗಿರುತ್ತೇವೆ. ನಾವು 7.15 ಗಂಟೆಗೆ ಠಾಣೆಯಲ್ಲಿದ್ದೆವು ಎಂದರೆ ಸರಿ. ಆಕಳಗವಿಯ ಚೆಕ್ ಪೋಸ್ಟ್ ಬಳಿ ಬಂದಿದ್ದ ಪಿ.ಡಬ್ಲ್ಯುಡಿ. ಇಂಜಿನಿಯರ್ ರವರನ್ನು ನಾನು ಘಟನಾ ಸ್ಥಳಕ್ಕೆ ಕರೆದುಕೊಂಡು ಹೋಗಿ

ತೋರಿಸಿರುತ್ತೇನೆ. ಆಕಳಗವಿ ಚೆಕ್ ಪೋಸ್ಟ್ ಬಳಿ ನಾನು ಪಿ.ಡಬ್ಲ್ಯುಡಿ. ಇಂಜಿನಿಯರ್ ರವರನ್ನು ಭೇಟಿ ಮಾಡಿದಾಗ ಮಧ್ಯಾಹ್ನ 12.30 ಆಗಿತ್ತು. ಸದರಿ ಪಿ.ಡಬ್ಲ್ಯುಡಿ. ಇಂಜಿನಿಯರ್ ರವರ ಹೆಸರು ನನಗೆ ಈಗ ನೆನಪಿಲ್ಲ. ಆಕಳಗವಿಯ ಚೆಕ್ ಪೋಸ್ಟ್ ನಿಂದ ನಾನು ಹಾಗೂ ಪಿ.ಡಬ್ಲ್ಯುಡಿ. ಇಂಜಿನಿಯರ್ ರವರು ಘಟನಾ ಸ್ಥಳಕ್ಕೆ ನಡೆದುಕೊಂಡು ಹೋಗಿದ್ದೆವು ಹಾಗೂ ಸದರಿ ಸ್ಥಳವು 50-60 ಮೀ. ಅಂತರದಲ್ಲಿತ್ತು.

12. ನಿಪಿ-52 ನಕಾಶೆಯನ್ನು ಪಿ.ಡಬ್ಲ್ಯುಡಿ. ಇಂಜಿನಿಯರ್ ರವರು ಘಟನಾ ಸ್ಥಳದಲ್ಲಿಯೇ ತಯಾರಿಸಿರುತ್ತಾರೆ. ಅದನ್ನು ಈಗ ಸಾಕ್ಷಿಯು ನೋಡಿ ಗುರುತಿಸಿರುತ್ತಾರೆ. ನಿಪಿ-52 ನಕಾಶೆಯನ್ನು ತಯಾರಿಸುವ ಕಾಲದಲ್ಲಿ ನಾನು ಹಾಗೂ ಪಿ.ಡಬ್ಲ್ಯುಡಿ. ಇಂಜಿನಿಯರ್ ರವರು ಘಟನಾ ಸ್ಥಳದಲ್ಲಿ ಸುಮಾರು 2 ತಾಸುಗಳ ಕಾಲ ಇದ್ದೆವು. ಮಂಗಳೂರಿನ ಆರ್.ಎಫ್.ಎಸ್.ಎಲ್. ಗೆ ವಸ್ತುಗಳನ್ನು ತಲುಪಿಸಲು ತನಿಖಾಧಿಕಾರಿಗಳು ನನಗೆ ಮೌಖಿಕವಾಗಿ ಸೂಚಿಸಿರುತ್ತಾರೆ. ತನಿಖಾಧಿಕಾರಿಗಳು ನನಗೆ ನೀಡಿದ ವಸ್ತುಗಳು ಸೀಲಾಗಿದ್ದ ಕಾರಣ, ಅವುಗಳನ್ನು ನಾನು ನೋಡಿರುವುದಿಲ್ಲ. ತನಿಖಾಧಿಕಾರಿಗಳು ನೀಡಿದ ಕೋರಿಕೆ ಪತ್ರದಲ್ಲಿ ಯಾವ ಯಾವ ವಸ್ತುಗಳನ್ನು ನಮೂದಿಸಿದ್ದರು ಎಂದು ನನಗೆ ಹೇಳಲು ಬರುವುದಿಲ್ಲ. ಮಂಗಳೂರಿನ ಆರ್.ಎಫ್.ಎಸ್.ಎಲ್. ಗೆ ವಸ್ತುಗಳನ್ನು ನಾನು ತಲುಪಿಸಿದ ಬಗ್ಗೆ ಸ್ವೀಕೃತಿಯನ್ನು ಅದೇ ದಿನ ತಂದು ತನಿಖಾಧಿಕಾರಿಯ ಮುಂದೆ ಹಾಜರುಪಡಿಸಿರುತ್ತೇನೆ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿರುವ ಸಂಗತಿಗಳು ಸುಳ್ಳು ಇರುತ್ತವೆ ಎಂದರೆ ಸರಿಯಲ್ಲ. ದಿ.23-10-2018 ರಂದು ತನಿಖಾಧಿಕಾರಿಗಳು ನಮ್ಮನ್ನು ಆರೋಪಿತರ ಭದ್ರತೆಗಾಗಿ ನೇಮಿಸಿದ್ದರು, ಹಾಗೂ ನಾವು ಘಟನಾ ಸ್ಥಳಕ್ಕೆ ಹೋಗಿದ್ದೆವು ಹಾಗೂ ಅಲ್ಲಿ ತನಿಖಾಧಿಕಾರಿಗಳು ಪಂಚನಾಮೆ ಮಾಡಿ ಫೋಟೋ ತೆಗೆದಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅದೇ ರೀತಿ, ಸ್ಥಳಕ್ಕೆ ವೈದ್ಯರು ಬಂದಿದ್ದು, ಶವ ಪರೀಕ್ಷೆಯನ್ನು ಮಾಡಿದ್ದರು. ಆನಂತರ ಶವವನ್ನು ಮೃತ ಸಂಬಂಧಿಕರಿಗೆ ಹಸ್ತಾಂತರಿಸಲಾಗಿತ್ತು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆನಂತರ ಸಿವಿಲ್ ಆಸ್ಪತ್ರೆಗೆ ಬಂದು ಮೋಟಾರು ಸೈಕಲ್ ಜಪ್ತುಪಡಿಸಿಕೊಂಡು ಪಂಚನಾಮೆ ಮಾಡಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಘಟನಾ ಸ್ಥಳಕ್ಕೆ ಎಂಜಿನಿಯರ್ ರವರನ್ನು ಕರೆದುಕೊಂಡು ಹೋಗಿ ನಾನು ಸ್ಥಳ ತೋರಿಸಿದ್ದು, ಅವರು ನಕಾಶೆ ತಯಾರಿಸಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಯಾವುದೇ ವಸ್ತುಗಳನ್ನು ಮಂಗಳೂರಿಗೆ

ತಲುಪಿಸಿಲ್ಲ ಹಾಗೂ ಯಾವುದೇ ಸ್ವೀಕೃತಿ ಪತ್ರ ನೀಡಿಲ್ಲ ಎಂದರೆ ಸರಿಯಲ್ಲ. ನನ್ನ ಸಮಕ್ಷಮ ಆರೋಪಿತರು ಯಾವುದೇ ಸ್ವ–ಖುಷಿ ಹೇಳಿಕೆ ನೀಡಿಲ್ಲ ಎಂದರೆ ಸರಿಯಲ್ಲ. ಈ ಪ್ರಕರಣದಲ್ಲಿ ತನಿಖೆಗೆ ಯಾವುದೇ ಸಹಾಯ ಮಾಡಿಲ್ಲದಿದ್ದರೂ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ 4 ನೇ ಆರೋಪಿ ಪರ ಶ್ರೀ ಎನ್.ವಿ.ಎನ್. ವಕೀಲರಿಂದಃ–**

13. ಪ್ರೇಮ್ ಕುಮಾರನ ಕೊಲೆಯಾದ ಬಗ್ಗೆ 4 ನೇ ಆರೋಪಿಗೆ ಯಾವುದೇ ಮಾಹಿತಿ ಇರಲಿಲ್ಲ ಎಂದರೆ ಸರಿಯಲ್ಲ. 4 ನೇ ಆರೋಪಿಯು 1 ನೇ ಆರೋಪಿಯನ್ನು ಕರೆದುಕೊಂಡು ಹೋಗಿ, ಗೋವಾಕ್ಕೆ ಬಿಟ್ಟು ಬಂದಿಲ್ಲ ಹಾಗೂ ಆತನಿಗೆ ತಪ್ಪಿಸಿಕೊಳ್ಳಲು ಸಹಾಯ ಮಾಡಿಲ್ಲ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ 5 ನೇ ಆರೋಪಿ ಪರ ಶ್ರೀ ಹೆಚ್.ಎಸ್.ಎಸ್. ವಕೀಲರಿಂದಃ–**

14. ತನಿಖಾಧಿಕಾರಿಗಳು ನನ್ನ ಹಿರಿಯ ಅಧಿಕಾರಿ ಎಂದರೆ ಸರಿ. ಅವರು ಹೇಳಿದಂತೆ ನಾನು ತನಿಖೆ ಮಾಡಬೇಕಾಗುತ್ತದೆ ಎಂದರೆ ಸರಿ. 5 ನೇ ಆರೋಪಿಗೆ ಪ್ರಕರಣದ ಬಗ್ಗೆ ಸಂಪೂರ್ಣ ಮಾಹಿತಿ ಇದ್ದರೂ ಸಹ, ಆತ ಪೊಲೀಸರಿಗೆ ಮಾಹಿತಿ ನೀಡಿಲ್ಲ ಎಂದು ತನಿಖಾಧಿಕಾರಿ ಹೇಳಿದ ಮೇರೆಗೆ ನಾನು ಹೇಳಿರುತ್ತೇನೆ ಎಂದರೆ ಸರಿಯಲ್ಲ. ಈ ಪ್ರಕರಣದ ಬಗ್ಗೆ ಮಾಹಿತಿ ಇಲ್ಲದಿದ್ದರೂ ಸಹ, ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ.)

ಓ.ಹೇ.ಕೇ.ಸ.ಇ.

Sd/-

(ಮಾಯಣ್ಣ ಬಿ.ಎಲ್.)
2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉತ್ತರಕನ್ನಡ, ಕಾರವಾರ